# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ದಿನಾಂಕ:05-10-2021

## ವಾರ್ಡ್-85ರ ವಾರ್ಡ್ ಸಮಿತಿ ಸಭೆ

## *ಸಭೆಯ ನಡವಳಿಗಳು*

ವಿಷಯ:- ಮಾನ್ಯ ಆಯುಕ್ತರು ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ:21-09-2020 ರವರ ಆದೇಶದಂತೆ ದಿನಾಂಕ:05-10-2021 ರಂದು ವಾರ್ಡ್ ನಂ.85 ರ ಎ.ಇ.ಸಿ.ಎಸ್ ಬಡಾವಣೆ, ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾಗಿದ್ದವರ ವಿವರಗಳು:</u>

| ಕ್ರ ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1 | ಶ್ರೀ.ಪ್ರಕಾಶ್ | ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷರು |
| 2 | ಶ್ರೀ.ರಾಚಿಪ | ಕಾರ್ಯದರ್ಶಿ |
| 3 | ಶ್ರೀ.ದೇವರಾಜ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ಶ್ರೀ.ರಘುನಂದನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ಮಂಜುನಾಥ್ | ಸಹಾಯಕ ಅಭಿಯಂತರರು, ಬೆಸ್ಕಾಂ |
| 6 | ಶ್ರೀ.ರವಿಂದ್ರ | BWSSB |
| 7 | ಶ್ರೀ.ಆಕಾಶ್ | ರಸ್ತೆ ಮೂಲಭೂತ ಸೌಕರ್ಯ |
| 8 | ಶ್ರೀ.ಜಗದೀಶ್ | ಬೀದಿ ದೀಪಗಳು |
| 9 | ಶ್ರೀ.ವೆಂಕಟೇಶ್ | ಎ.ಇ.ಸಿ.ಎಸ್ ಲೇಔಟ್ ಅಸೋಶಿಯೇಷನ್ ಅಧ್ಯಕ್ಷರು |
| 10 | ಶ್ರೀ.ವೆಂಕಟೇಶ್.ಹೆಚ್ | ಎ.ಇ.ಸಿ.ಎಸ್ ಲೇಔಟ್ ಅಸೋಶಿಯೇಷನ್ ಕಾರ್ಯದರ್ಶಿ |
| 11 | ಶ್ರೀ.ಸಿ.ಟಿ.ಮಲ್ಲೇಶ್ | ಎ.ಇ.ಸಿ.ಎಸ್ ಲೇಔಟ್ |
| 12 | ಶ್ರೀ.ಈಶ್ವರ್ | ಎ.ಇ.ಸಿ.ಎಸ್ ಲೇಔಟ್ |
| 13 | ಶ್ರೀ.ಜೂಡ್ | ವಾಸ ಲೇಔಟ್ |
| 14 | ಶ್ರೀ.ರಮೇಶ್ | ವಾಸ ಲೇಔಟ್ |
| 15 | ಶ್ರೀಮತಿ.ರಾಜಶ್ರೀ | ವಾಸ ಲೇಔಟ್ |
| 16 | ಶ್ರೀ.ಸುಂದರ್‌ರಾಜ್ | ಎ.ಇ.ಸಿ.ಎಸ್ ಲೇಔಟ್ |
| 17 | ಪೋಲಿಸ್ ಸಿಬ್ಬಂದಿ | ಹೆಚ್.ಎ.ಎಲ್ |

ಶ್ರೀ.ಪ್ರಕಾಶ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ಸಭೆಯಲ್ಲಿ ಹಾಜರಿದ್ದ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿರವರುಗಳಿಗೆ ಹಾಗೂ ಸಂಘಸಂಸ್ಥೆಯ ಮುಖ್ಯಸ್ಥರಿಗೆ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

Scanned with CamScanner

1. ಸಭೆಯಲ್ಲಿ ಎ.ಇ.ಸಿ.ಎಸ್ ಲೇಔಟ್‌ನಲ್ಲಿ ಮರಗಳಿಂದ ಬಿದ್ದಿರುವಂತಹ ಎಲೆಗಳ ಕಸದ ಗುಡ್ಡೆಯನ್ನು ಅಲ್ಲಲ್ಲಿ ತೆರವುಗೊಳಿಸಿರುವುದಿಲ್ಲ ಎಂದು ಶ್ರೀ.ಮಲ್ಲೇಶ್ ರವರು ದೂರಿರುತ್ತಾರೆ.

2. ಕ್ರ.ಸಂ.1 ರ ಉತ್ತರವಾಗಿ ಶ್ರೀ.ರಘುನಂದನ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಎ.ಇ.ಸಿ.ಎಸ್ ಲೇಔಟ್‌ನಲ್ಲಿ ತುಂಬಾ ಮರಗಳಿದ್ದು, ಈಗಾಗಲೇ ನಾವುಗಳು ಖಾಸಗಿ ಟ್ರ್ಯಾಕ್ಟರ್ ಮುಖಾಂತರ ಎಲೆಗಳ ಕಸದ ಗುಡ್ಡೆಗಳನ್ನು ತೆರವುಗೊಳಿಸುವ ಕಾಮಗಾರಿಯನ್ನು ನಿರ್ವಹಿಸಿರುತ್ತೀರುತ್ತೀರಿ. ಹಾಗೂ ಬಿಬಿಎಂಪಿ ವತಿಯಿಂದ ಟ್ರ್ಯಾಕ್ಟರ್‌ಗಳನ್ನು ಒದಗಿಸಲು ಮನವಿಯನ್ನು ಕೋರಿರುತ್ತಾರೆ. ಸದರಿ ಮನವಿಯನ್ನು ಶ್ರೀ.ಪ್ರಕಾಶ್., ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ರವರು ಪರಿಗಣಿಸಿ ಸದರಿ ವಿಚಾರವನ್ನು ಪತ್ರದ ಮುಖಾಂತರ ಕೋರುತ್ತೇವೆ ಮತ್ತು ಎಲೆಗಳ ಕಸದ ಗುಡ್ಡೆಗಳನ್ನು ತೆರವುಗೊಳಿಸಲು ಬ್ಲಾಕ್ ವೈಸ್ ವೇಳಾಪಟ್ಟಿಯನ್ನು ನಿಗಧಿಪಡಿಸಲು ತಿಳಿಸಿರುತ್ತಾರೆ.

3. ಶ್ರೀ.ರಮೇಶ್, ವಾಸ ಬಡಾವಣೆ ರವರು ಕಸದ ವಾಹನಗಳ ಜಿ.ಪಿ.ಎಸ್ ವರದಿಯನ್ನು ಶುಚಿಮಿತ್ರ ರವರಿಗೆ ನೀಡಲು ಹಾಗೂ ಪರಿವೀಕ್ಷಿಸಲು ಕೋರಿರುತ್ತಾರೆ. ಮತ್ತು ಶುಚಿಮಿತ್ರ ರವರಿಗೆ ಬಿಬಿಎಂಪಿ ವತಿಯಿಂದ ಬಿಬಿಎಂಪಿ ಜ್ಯಾಕೇಟ್ಸ್‌ಗಳನ್ನು ನೀಡಲು ಶ್ರೀ.ರಘುನಂದನ್, ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಕೋರಿರುತ್ತಾರೆ.

4. ಶ್ರೀ.ರಮೇಶ್, ವಾಸ ಬಡಾವಣೆ ರವರು ದೊಡ್ಡನೆಕ್ಕುಂದಿ ಸರ್ಕಾರಿ ಶಾಲೆಯ ಆವರಣದ ವಿದ್ಯುತ್ ಕಂಬದಲ್ಲಿ ಬೀದಿದೀಪ ಇಲ್ಲದಿರುವ ಕಾರಣ ಕೆಲವೊಂದು ವ್ಯಕ್ತಿಗಳು ಮದ್ಯಪಾನ ಮತ್ತು ಅನ್ಯ ಚಟುವಟಿಗಳನ್ನು ಮಾಡಲು ಸುಲಭವಾಗಿರುತ್ತದೆ. ಆದ್ದರಿಂದ ವಿದ್ಯುತ್ ಬೀದಿದೀಪಗಳನ್ನು ಅಳವಡಿಸಲು ಹಾಗೂ ಇನ್ನು ಮುಂದೆ ಮದ್ಯಪಾನ ಮತ್ತು ಅನ್ಯ ಚಟುವಟಿಗಳನ್ನು ನಡಸದೇ ಇರಲು ಪೋಲಿಸ್ ಸಿಬ್ಬಂದಿ ರವರಿಗೆ ಕೋರಿರುತ್ತಾರೆ.

5. ಶ್ರೀ.ಈಶ್ವರ್ ಎ.ಇ.ಸಿ.ಎಸ್ ಲೇಔಟ್, ಕಳೆದ 3 ವರ್ಷಗಳಿಂದ ಇದುವರೆಗೂ ವಾರ್ಡ್‌ಗೆ ಯಾವುದೇ ಹೊಸದಾಗಿ ಬೀದಿದೀಪಗಳನ್ನು ಅಳವಡಿಸಿರುವುದಿಲ್ಲ. ಮತ್ತು ಹೊಸದಾಗಿ ಬೀದಿದೀಪಗಳನ್ನು ಅಳವಡಿಸಲು ಕೋರಿರುತ್ತಾರೆ. ಹಾಗೂ ಈಗಾಗಲೇ ಇರುವಂತಹ ಬೀದಿದೀಪಗಳಲ್ಲಿರುವ ಸೋಲರ್ ಬಲ್ಬ್‌ಗಳನ್ನು ತೆಗೆದು ಎಲ್.ಇ.ಡಿ ಬಲ್ಬ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ಕೈಗೊಳ್ಳುವ ಮಾಹಿತಿಯನ್ನು ಕೋರಿರುತ್ತಾರೆ.

6. ಮೇಲ್ಕಂಡ ಕ್ರ.ಸಂ. 4 ಮತ್ತು 5 ರ ಉತ್ತರವಾಗಿ ಶ್ರೀ.ಜಗದೀಶ್ ರವರು ಹೊಸದಾಗಿ ಎಲ್.ಇ.ಡಿ ಬಲ್ಬ್‌ಗಳನ್ನು ಅಳವಡಿಸಲು ಈಗಾಗಲೇ ಸರ್ವೆಯನ್ನು ಕೈಗೊಂಡಿದ್ದು, ಸರ್ವೆ ಮುಕ್ತಾಯವಾದ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.

7. ಶ್ರೀ.ಈಶ್ವರ್ ಎ.ಇ.ಸಿ.ಎಸ್ ಲೇಔಟ್‌ನಲ್ಲಿ ಇತ್ತೀಚೆಗೆ ವಿದ್ಯುತ್ ಸಂಪರ್ಕವು ಬಹಳ ವೇಳೆ ವಿದ್ಯುತ್ ಸಂಪರ್ಕ ಕಡಿತವಾಗುವ ಕಾರಣವನ್ನು ಕೋರಿರುತ್ತಾರೆ.

Scanned with CamScanner

8. ಶ್ರೀ.ಮಂಜುನಾಥ್, ಬೆಸ್ಕಾಂ, ಸಹಾಯಕ ಅಭಿಯಂತರರು ರವರು ಕ್ರ.ಸಂ.7 ರ ಉತ್ತರವಾಗಿ ವಾರ್ಡ್‌ನಲ್ಲಿ ಯು.ಜಿ. ವಿದ್ಯುತ್ ಕೇಬಲ್ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಮತ್ತು ಮಳೆಗಾಲವಾಗಿರುವುದರಿಂದ ಕೆಲವೊಂದು ವೇಳೆ ವಿದ್ಯುತ್ ಸಂಪರ್ಕ ಕಡಿತವಾಗುದೆಂದು ತಿಳಿಸಿರುತ್ತಾರೆ.

9. ಶ್ರೀ.ಈಶ್ವರ್ ಎ.ಇ.ಸಿ.ಎಸ್ ಲೇಔಟ್, ನಂ.766, ಸಿ ಬ್ಲಾಕ್, 2ನೇ ಮುಖ್ಯ ರಸ್ತೆ ಮತ್ತು ಇನ್ನಿತರೆ ವಾರ್ಡ್ ಸ್ಥಳಗಳಲ್ಲಿ ವಿದ್ಯುತ್ ಓಲ್ಟೇಜ್ ಹೆಚ್ಚಾಗಿ ಬರುತ್ತಿದ್ದು ಇದನ್ನು ಸರಿಪಡಿಸಲು ಕೋರಿರುತ್ತಾರೆ.

10.ಶ್ರೀ.ಮಂಜುನಾಥ್, ಬೆಸ್ಕಾಂ, ಸಹಾಯಕ ಅಭಿಯಂತರರು ರವರು ಕ್ರ.ಸಂ.9 ರ ಉತ್ತರವಾಗಿ ಇದುವರೆಗೂ ಸದರಿ ವಿಚಾರವು ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಇನ್ನು ಮುಂದೆ ಸರಿಪಡಿಸುವುದಾಗಿ ತಿಳಿಸಿರುತ್ತಾರೆ.

11.ಶ್ರೀ.ಜೂಡ್, ವಾಸ ಬಡಾವಣೆಯಲ್ಲಿ ಮರದ ಕೊಂಬೆಗಳು ವಿದ್ಯುತ್ ತಂತಿಗಳಿಗೆ ತಾಕುತಿದ್ದು, ಸದರಿ ಮರದ ಕೊಂಬೆಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.

12.ಶ್ರೀ.ಈಶ್ವರ್ ಎ.ಇ.ಸಿ.ಎಸ್ ಲೇಔಟ್, ಇತ್ತಿಚೆಗೆ BWSSB ನ ನೀರಿನ ಸೋರಿಕೆ ಮತ್ತು ಸ್ಯಾನಿಟರಿ ಸೋರಿಕೆಯ ದೂರುಗಳನ್ನು ಸರಿಯಾಗಿ ಕ್ರಮವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ 9 ಇಂಚಿನ ಯು.ಜಿ.ಡಿ ಪೈಪ್‌ಗಳ ಕಾಮಗಾರಿಗಳ ಮಾಹಿತಿಯನ್ನು ಕೋರಿರುತ್ತಾರೆ.

13.ಶ್ರೀ.ರವೀಂದ್ರ, BWSSB, ಸಹಾಯಕ ಅಭಿಯಂತರರು ರವರು ಕ್ರ.ಸಂ.12 ರ ಉತ್ತರವಾಗಿ ಈಗಾಗಲೇ ಕಾಮಗಾರಿಯ ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ.

14.ವಾರ್ಡ್ ನಂ.85 ಕ್ಕೆ ಸಂಬಂಧಪಟ್ಟಂತೆ ಒಂಟಿ ಮನೆಗಳ ಫಲಾನುಭವಿಗಳ ಕಾರ್ಯಾದೇಶವನ್ನು ನೀಡಲು ಕಡತವನ್ನು ಕಾರ್ಯಪಾಲಕ ಅಭಿಯಂತರರಿಗೆ ಸಲ್ಲಿಸಲು ಮಾನ್ಯ ನೋಡಲ್ ಅಧಿಕಾರಿ ಮತ್ತು ಅಧ್ಯಕ್ಷಕರು ಶ್ರೀ.ಪ್ರಕಾಶ್, ರವರು ಸೂಚಿಸಿದರು.

15. ವಾರ್ಡ್ ನಂ.85 ಕ್ಕೆ ಸಂಬಂಧಪಟ್ಟಂತೆ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ ಗುಂಡಿ ಮುಚ್ಚವ ಕಾಮಗಾರಿಗೆ 20.00 ಲಕ್ಷಗಳು, ಪಾದಚಾರಿ ನಿರ್ವಹಣೆಗಾಗಿ 20.00ಲಕ್ಷಗಳು ಮತ್ತು ನೀರು ಸರಬರಾಜು ಕಾಮಗಾರಿಗೆ 20.00 ಲಕ್ಷಗಳನ್ನು ಕಾಯ್ದೆಇರಿಸಲು ಅನುಮೋದನೆಯನ್ನು ಶ್ರೀ.ರಾಚಿಪ, ಸಹಾಯಕ ಅಭಿಯಂತರರು, ರವರು ಸಭೆಗೆ ಅನುಮೋದನೆ ಸಲ್ಲಿಸಿರುತ್ತಾರೆ.

16.ಶ್ರೀ.ಈಶ್ವರ್ ಎ.ಇ.ಸಿ.ಎಸ್ ಲೇಔಟ್, ಸಬ್ ಇನ್ಸ್‌ಪೆಕ್ಟರ್, ಹೆಚ.ಎ.ಎಲ್ ಠಾಣೆ ರವರಿಗೆ ಇತ್ತಿಚೆಗೆ ವಾರ್ಡ್‌ನಲ್ಲಿ ದ್ವಿಚಕ್ರ ವಾಹನಗಳು ಹಾಗೂ ಇತರೆ ಕಳ್ಳತನಗಳ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ರಾತ್ರಿ ಪಾಳಿದಲ್ಲಿ ವಾರ್ಡ್ ರಸ್ತೆಗಳಲ್ಲಿ ಗಸ್ತು ಮಾಡಲು ಕೋರಿದರು. ಸದರಿ ವಿಷಯಕ್ಕೆ ಸಬ್ ಇನ್ಸ್‌ಪೆಕ್ಟರ್ ರವರು ಮುಂದೆ ನಿರಂತರವಾಗಿ ಗಸ್ತು ಮಾಡಲು ಒಪ್ಪಿಕೊಂಡರು.

Scanned with CamScanner

17.ಇಂದಿನ ಸಭೆಯಲ್ಲಿ ಎ.ಇ.ಸಿ.ಎಸ್.ಬಡಾವಣೆಯ ಕಾರ್ಯದರ್ಶಿ, ಶ್ರೀ.ವೆಂಕಟೇಶ್ ರವರು ಕೋರಿರುವಂತೆ ಎ.ಇ.ಸಿ.ಎಸ್ ಬಡಾವಣೆಯ 60 ಅಡಿ ರಸ್ತೆ ಪಾದಚಾರಿ ಮಾರ್ಗದಲ್ಲಿ ಅಳವಡಿಸಿರುವ ಅಂಗಡಿ ಮುಗಟ್ಟುಗಳನ್ನು ತೆರವುಗೊಳಿಸಲಾಗಿದ್ದು, ಆದರೆ ಸದರಿ ಸ್ಥಳದಲ್ಲಿ ಮತ್ತೆ ಬೀದಿ ವ್ಯಾಪಾರಿಗಳು ಅಂಗಡಿ ಮುಗಟ್ಟುಗಳು ಇರಿಸಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಪೋಲಿಸ್ ಠಾಣೆ ರವರಿಗೆ ಪತ್ರದ ಬರೆದು ಪುಟ್‌ಪಾತ್ ತೆರವು ಕಾರ್ಯಚಾರಣೆಗೆ ಖುದ್ದಾಗಿ ಪೋಲಿಸ್ ಮೇಲು ಅಧಿಕಾರಿಗಳು ಸಮ್ಮುಖದಲ್ಲಿ ತೆರವುಗೊಳಿಸಲು ಕೋರಿದರು. ಹಾಗೂ ವಾರ್ಡ್‌ನ ಕೆಲವೊಂದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕೋರಿರುತ್ತಾರೆ.

ಸಭೆಯಲ್ಲಿ ಇತರ ಇಲಾಖೆಯವರಾದ ಮತ್ತು ತೋಟಗಾರಿಕೆ ಇಲಾಖೆ ರವರಿಗೆ ಮುಂದಿನ ಸಭೆಗೆ ಹಾಜರಾಗಲು ನೋಟೀಸ್ ಜಾರಿ ಮಾಡಲು ಶ್ರೀ.ಪ್ರಕಾಶ್, ನೋಡಲ್ ಅಧಿಕಾರಿ ಹಾಗೂ ಅಧ್ಯಕ್ಷಕರು ಸೂಚಿಸಿದರು.

ಈ ಮೇಲ್ಕಂಡ ಅಂಶಗಳನ್ನು ಆದ್ಯತೆ ಮೇರೆಗೆ ನಿರ್ವಹಿಸಲು ಅಧ್ಯಕ್ಷರು ಸೂಚಿಸಿದರು ಹಾಗೂ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಕಾರ್ಯದರ್ಶಿ | ನೋಡಲ್ ಅಧಿಕಾರಿ ಹಾಗೂ |
| ವಾರ್ಡ್ ನಂ.85 | ವಾರ್ಡ್ ಕಮಿಟಿ ಅಧ್ಯಕ್ಷರು |
| | ವಾರ್ಡ್ ನಂ.85 |

Scanned with CamScanner